KACN220001202023

## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಂಡ್ಲುಪೇಟೆ.

**ದಿನಾಂಕ : 28 ನೇ ನವೆಂಬರ್ 2024**

**ಉಪಸ್ಥಿತರು : ಶ್ರೀಮತಿ ಎ.ಎನ್.ಕಾಂತಮ್ಮ, ಬಿ.ಎ., ಎಲ್.ಎಲ್.ಬಿ.,**
*ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,*
ಗುಂಡ್ಲುಪೇಟೆ.

## ಸಿ.ಸಿ ನಂಬರ್ : 40/2023

**ಫಿರ್ಯಾದುದಾರರು : ಸರ್ಕಾರದ ಪರವಾಗಿ :**

ಬೇಗೂರು ಪೊಲೀಸ್ ಠಾಣೆ

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

*: ವಿರುದ್ಧ :*

**ಆರೋಪಿತರು :**

1. ಜ್ಯೋತೀಶ್ ವೈ ಎಸ್ ಬಿನ್ ಲೇಟ್ ಶಿವಣ್ಣನಾಯಕ, 30 ವರ್ಷ ವಯಸ್ಸು
2. ಪ್ರತಿಮಾ ಬಿನ್ ಮಹೇಶ್, 33 ವರ್ಷ ವಯಸ್ಸು
3. ರತ್ನಮ್ಮ ಬಿನ್ ಶಿವಣ್ಣನಾಯಕ, 55 ವರ್ಷ ವಯಸ್ಸು

4. ಹೊಣಕಾರನಾಯಕ ಬಿನ್ ಲೇಟ್ ಮಾದನಾಯಕ, 72 ವರ್ಷ ವಯಸ್ಸು
5. ಸಿದ್ದನಾಯಕ ಬಿನ್ ಲೇಟ್ ಚಿಕ್ಕಹೊಣಕಾರನಾಯಕ, 75 ವರ್ಷ ವಯಸ್ಸು
6. ನಾರಾಯಣನಾಯಕ ಬಿನ್ ಲೇಟ್ ರಂಗನಾಯಕ, 58 ವರ್ಷ ವಯಸ್ಸು
7. ಮಹೇಶ ವೈ ಎಸ್ ಬಿನ್ ಲೇಟ್ ಸಿದ್ದನಾಯಕ, 45 ವರ್ಷ ವಯಸ್ಸು
8. ಶಿವರಾಜು ಬಿನ್ ಸಿದ್ದನಾಯಕ, 43 ವರ್ಷ ವಯಸ್ಸು
9. ರಂಗನಾಯಕ ಬಿನ್ ಲೇಟ್ ಪುಟ್ಟನಾಯಕ, 85 ವರ್ಷ ವಯಸ್ಸು
10. ಭಾಗ್ಯ ಬಿನ್ ರೇವಣ್ಣ ನಾಯಕ, 42 ವರ್ಷ ವಯಸ್ಸು
11. ಮಹದೇವನಾಯಕ ಬಿನ್ ಲೇಟ್ ಹೊಣಕಾರನಾಯಕ, 35 ವರ್ಷ
12. ಮಹದೇವಮ್ಮ @ ಮಲ್ಲಿಗಮ್ಮ ಬಿನ್ ಶಿವಣ್ಣನಾಯಕ, 50 ವರ್ಷ ವಯಸ್ಸು
13. ರೇವಣ್ಣನಾಯಕ ಬಿನ್ ಲೇಟ್ ಸಿದ್ದನಾಯಕ, 49 ವರ್ಷ ವಯಸ್ಸು
14. ತೋಪಮ್ಮ ಕೋಂ ಸಿದ್ದನಾಯಕ, 80 ವರ್ಷ ವಯಸ್ಸು
15. ಶಿವಯ್ಯನಾಯಕ ಬಿನ್ ಲೇಟ್ ಸಿದ್ದನಾಯಕ, 55 ವರ್ಷ ವಯಸ್ಸು

ಎಲ್ಲರೂ ವಾಸ : ಯಡವನಹಳ್ಳಿ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು.

8ನೇ ಆರೋಪಿಯು ಮೃತರಾಗಿದ್ದು, ಈ ಪ್ರಕರಣದಿಂದ ಪ್ರತ್ಯೆಜಿಸಲಾಗಿರುತ್ತದೆ.

***(ಆರೋಪಿತರು ಶ್ರೀ. ಪಿ ಎಸ್ ಜಿ ವಕೀಲರಿಂದ ಪ್ರತಿನಿಧಿಸಲ್ಪಟ್ಟಿರುತ್ತಾರೆ.)***

**ಘಟನೆಗಳ ವಿವರ :**

| | |
|---|---|
| ಪ್ರಕರಣ ದಾಖಲಾದ ದಿನಾಂಕ | 28.05.2022 |
| ಸಾಕ್ಷಿ ವಿಚಾರಣೆ ಮಾಡಿದ ದಿನಾಂಕ | 20.11.2024 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 25.11.2024 |
| ಆಪಾದಿಸಿದ ಆಪಾದನೆಗಳು | ಭಾರತೀಯ ದಂಡ ಸಂಹಿತೆ ಕಲಂ 143, 147, 148, 504, 355, 323, 324, 354(ಬಿ), 114, 506 ಸಹವಾಚಕ ಕಲಂ 149 |

| | |
|---|---|
| ನ್ಯಾಯಾಧೀಶರ ಅಭಿಪ್ರಾಯ | ಹೇಳಲಾಗಿರುವ ಆಪಾದನೆಗಳಿಂದ 1 ರಿಂದ 7, 9 ರಿಂದ 15 ನೇ ಆರೋಪಿತರನ್ನು ದೋಷಮುಕ್ತಗೊಳಿಸಿ, ಸ್ವತಂತ್ರಗೊಳಿಸಿ, ಬಿಡುಗಡೆ ಮಾಡಲಾಗಿದೆ. |
| ತೀರ್ಪು ನೀಡಿದ ದಿನಾಂಕ | 28.11.2024 |

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ,.**
**ಗುಂಡ್ಲುಪೇಟೆ**

## ತೀರ್ಪು

ಬೇಗೂರು ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು 1 ರಿಂದ 15 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 143, 147, 148, 504, 355, 323, 324, 354(ಬಿ), 114, 506 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳನ್ನು ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿರುತ್ತದೆ.**

ದಿನಾಂಕ 23.05.2022 ರಂದು ಸಂಜೆ **6.30** ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಯಡವನಹಳ್ಳಿ ಗ್ರಾಮದಲ್ಲಿ ಹರಿಹರೇಶ್ವರ ದೇವಸ್ಥಾನದ ಮುಂಭಾಗ ಇರುವ ಚಾಸಾ–1 ಸಣ್ಣಮ್ಮ ರವರ ಮನೆಯ ಮುಂದೆ ಚಾಸಾ–1 ಸಣ್ಣಮ್ಮ ರವರು ಕುಳಿತಿದ್ದಾಗ, ಆರೋಪಿಗಳು ಚಾಸಾ–1 ಸಣ್ಣಮ್ಮ ರವರ ಜೊತೆಗೆ ಏಕೋದ್ದೇಶದಿಂದ ಜಗಳ ತೆಗೆದು ಅಕ್ರಮ ಕೂಟವನ್ನು ಕಟ್ಟಿಕೊಂಡು ಅದರ ಸದಸ್ಯರಾಗಿ, ಮಾರಕ ಆಯುಧಗಳಾದ ದೊಣ್ಣೆ ಮತ್ತು ಕಲ್ಲನ್ನು ಕೈಯಲ್ಲಿ ಹಿಡಿದು ದೊಂಬಿ ಮಾಡಿ, ಚಾಸಾ–1 ಸಣ್ಣಮ್ಮ ರವರ ಜೊತೆ ಜಗಳ ತೆಗೆದು, ಗಲಾಟೆ ಮಾಡಿ, ಚಾಸಾ–1 ಸಣ್ಣಮ್ಮ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದನೆ ಮಾಡಿ, 1 ರಿಂದ 3 ನೇ ಆರೋಪಿಗಳು ಚಪ್ಪಲಿಯಿಂದ ಚಾಸಾ–1 ಸಣ್ಣಮ್ಮ ರವರಿಗೆ ಹೊಡೆದು ಅವಮಾನ ಮಾಡಿ, ಜಗಳ ಬಿಡಿಸಲು ಬಂದ ಚಾಸಾ–2 ಮಹೇಶ ಮತ್ತು ಚಾಸಾ–3 ಮಹದೇವ ರವರಿಗೆ 1 ಮತ್ತು 4 ನೇ ಆರೋಪಿಗಳು ಕೈಗಳಿಂದ ಮೈಕೈಗೆ ಹೊಡೆದು, 1 ಮತ್ತು 4 ನೇ ಆರೋಪಿಗಳು ಕಲ್ಲಿನಿಂದ ಹೊಡೆದು, 1, 4 ಮತ್ತು 5 ನೇ ಆರೋಪಿಗಳು ಚಾಸಾ–1 ಸಣ್ಣಮ್ಮ ರವರ ರವಿಕೆಯ ಒಳಗೆ ಕೈಹಾಕಿ, ರವಿಕೆಯನ್ನು ಹರಿದು ಹಾಕಿ, ಅವಮಾನ ಮಾಡುವ ಉದ್ದೇಶದಿಂದ ಸೀರೆಯನ್ನು ಹಿಡಿದು ಎಳೆದಾಡಿ, ಅವಮಾನ ಮಾಡಿ, 7 ರಿಂದ 15 ನೇ ಆರೋಪಿಗಳು ಇತರೆ ಆರೋಪಿಗಳಿಗೆ ಚಾಸಾ–1 ಸಣ್ಣಮ್ಮ ರವರನ್ನು ಬಿಡಬೇಡಿ, ಹೊಡೆದು ಹಾಕಿ ಎಂದು ಕುಮ್ಮಕ್ಕು ನೀಡಿ, ಚಾಸಾ–1 ಸಣ್ಣಮ್ಮ,

ಚಾಸಾ–2 ಮಹೇಶ ಮತ್ತು ಚಾಸಾ–3 ಮಹದೇವರವರಿಗೆ "ಈ ದಿನ ನಿಮ್ಮ ಟೈಂ ಚೆನ್ನಾಗಿದೆ, ನಿಮಗೊಂದು ಗತಿ ಕಾಣಿಸದೆ ಬಿಡುವುದಿಲ್ಲ " ಎಂದು ಕೊಲೆ ಬೆದರಿಕೆ ಹಾಕಿರುವುದರಿಂದ 1 ರಿಂದ 15 ನೇ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 143, 147, 148, 504, 355, 323, 324, 354(ಬಿ), 114, 506 ಸಹವಾಚಕ ಕಲಂ 149 ರ ಅಡಿಯಲ್ಲಿ ದೋಷಾರೋಪಣೆ ಮಾಡಿ, ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**3**. ಬೇಗೂರು ಪೊಲೀಸ್ ಠಾಣೆಯವರು ಚಾಸಾ–1 ರವರು ನೀಡಿದ ದೂರನ್ನು ದಾಖಲಿಸಿಕೊಂಡು ಮೊಕದ್ದಮೆ ಸಂಖ್ಯೆ 97/2022 ನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯು, ಗಾಯಳುಗಳ ಗಾಯದ ಪ್ರಮಾಣ ಪತ್ರವನ್ನು ಪಡೆದು, ಸಾಕ್ಷಿದಾರರ ಹೇಳಿಕೆಯನ್ನು ಪಡೆದು, ತನಿಖೆ ಪೂರೈಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಸದರಿ ಪ್ರಕರಣದಲ್ಲಿ 1 ರಿಂದ 15 ನೇ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 143, 147, 148, 504, 355, 323, 324, 354(ಬಿ), 114, 506 ಸಹವಾಚಕ ಕಲಂ 149 ರ ಅಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಂಡಿರುತ್ತದೆ.

**5.** 1 ರಿಂದ 15 ನೇ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ವಕೀಲರನ್ನು ನೇಮಿಸಿಕೊಂಡು, ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. 1 ರಿಂದ 15 ನೇ ಆರೋಪಿತರಿಗೆ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ಅಭಿಯೋಜನೆಯ ದಾಖಲೆಗಳ ನಕಲನ್ನು ಪೂರೈಸಲಾಗಿರುತ್ತದೆ. ನಂತರ ದೋಷಾರೋಪಣೆ ರಚಿಸುವ ಮೊದಲು ವಾದವನ್ನು ಕೇಳಿ, 1 ರಿಂದ 15 ನೇ ಆರೋಪಿತರ ವಿರುದ್ಧ ಆಪಾದಿಸಿರುವ ಆಪಾದನೆಗಳಿಗೆ ದೋಷಾರೋಪಣೆಯನ್ನು ರಚಿಸಲು ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಹಿಡಿದಿದ್ದರಿಂದ 1 ರಿಂದ 15 ನೇ ಆರೋಪಿತರ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ದಂಡ ಪ್ರಕ್ರಿಯಾ ಸಂಹಿತೆ ಕಲಂ 228(2) ರ ಅಡಿಯಲ್ಲಿ 1 ರಿಂದ 15 ನೇ ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿದಾಗ, 1 ರಿಂದ 15 ನೇ ಆರೋಪಿಗಳು ಯಾವುದೇ ತಪ್ಪು ಮಾಡಿಲ್ಲ ಎಂದು ಹೇಳಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ಎತ್ತಿಕೊಳ್ಳಲಾಯಿತು.

**6.** ಅಭಿಯೋಜನೆಯವರು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿದೆ. ದೋಷಾರೋಪಣಾ ಪಟ್ಟಿಯಲ್ಲಿ ಒಟ್ಟು 10 ಸಾಕ್ಷಿದಾರರನ್ನು ನಮೂದು ಮಾಡಿದ್ದು, ಆ ಪೈಕಿ ಮೂವರು ಸಾಕ್ಷಿದಾರರನ್ನು ಫ್ರಾಸಾ-1 ರಿಂದ 3 ಎಂದು ವಿಚಾರಣೆ ಮಾಡಿಕೊಂಡಿದ್ದಾರೆ. 6 ದಾಖಲೆಯನ್ನು ನಿಪಿ-1 ರಿಂದ 6 ಎಂದು ಗುರುತಿಸಿಕೊಂಡಿರುತ್ತಾರೆ. ಈ ಪ್ರಕರಣದ

ವಿಚಾರಣೆಯ ಸಮಯದಲ್ಲಿ ಈ ಪ್ರಕರಣದ 8 ನೇ ಆರೋಪಿ ಶಿವರಾಜು ಬಿನ್ ಸಿದ್ದನಾಯಕ ರವರು ಮೃತರಾಗಿರುತ್ತಾರೆಂದು ತಿಳಿಸಿದ ಮೇರೆಗೆ, ಈ ನ್ಯಾಯಾಲಯದ ಆದೇಶದ ದಿನಾಂಕ 05.01.2024 ರನ್ವಯ 8 ನೇ ಆರೋಪಿಯನ್ನು ಈ ಪ್ರಕರಣದಿಂದ ಪ್ರತ್ಯಜಿಸಲಾಗಿರುತ್ತದೆ.

**7.** ಈ ಪ್ರಕರಣದಲ್ಲಿ ಫಿರ್ಯಾದುದಾರರು ಹಾಗು ಗಾಯಾಳು ಸಾಕ್ಷಿದಾರರೇ ಅಭಿಯೋಜನೆಗೆ ಪ್ರತಿಕೂಲ ಸಾಕ್ಷವನ್ನು ನುಡಿದಿರುವುದರಿಂದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಇತರೆ ಸಾಕ್ಷಿಗಳಿಗೆ ಸಮನ್ಸ್ ನೀಡಬೇಕು ಎಂದು ಕೋರಿದ ಕೋರಿಕೆಯನ್ನು ತಿರಸ್ಕರಿಸಲಾಯಿತು ಹಾಗು ಭಾರತೀಯ ದಂಡ ಸಂಹಿತೆ ಕಲಂ 313 ರ ರೀತ್ಯಾ ಪಡೆದುಕೊಳ್ಳಬೇಕಾದ ಆರೋಪಿತರ ಹೇಳಿಕೆಯನ್ನು ನಿಲಂಭನಗೊಳಿಸಿಕೊಳ್ಳಲಾಯಿತು ಹಾಗು ಉಳಿದ ಸಾಕ್ಷಿದಾರರನ್ನು ನ್ಯಾಯಾಲಯದ ಮುಂದೆ ಕರೆಸಿ ವಿಚಾರಣೆ ಮಾಡಬೇಕೆಂಬ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಲಾಯಿತು.

**8.** ಉಭಯ ಪಕ್ಷಕಾರರ ಪರ ಹಾಜರಾದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರ ವಕೀಲರ ವಾದಗಳನ್ನು ಆಲಿಸಿ, ಪ್ರಕರಣದ ವಸ್ತುಸ್ಥಿತಿ ಮತ್ತು ಸಂದರ್ಭಗಳನ್ನು ಪರಿಶೀಲನೆ ಮಾಡಿದ ನಂತರ, ನನಗೆ ಈ ಕೆಳಕಂಡ ಅಂಶಗಳನ್ನು ತೀರ್ಮಾನಿಸಲು ಉದ್ಭವಿಸಿದೆ.

## ಅಂಶಗಳು

(1) ದಿನಾಂಕ 23.05.2022 ರಂದು ಸಂಜೆ **6.30** ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಯಡವನಹಳ್ಳಿ ಗ್ರಾಮದಲ್ಲಿ ಹರಿಹರೇಶ್ವರ ದೇವಸ್ಥಾನದ ಮುಂಭಾಗ ಇರುವ ಚಾಸಾ–1 ಸಣ್ಣಮ್ಮ ರವರ ಮನೆಯ ಮುಂದೆ ಚಾಸಾ–1 ಸಣ್ಣಮ್ಮ ರವರು ಕುಳಿತಿದ್ದಾಗ, ಆರೋಪಿಗಳು ಚಾಸಾ–1 ಸಣ್ಣಮ್ಮ ರವರ ಜೊತೆಗೆ ಏಕೋದ್ದೇಶದಿಂದ ಜಗಳ ತೆಗೆದು ಅಕ್ರಮ ಕೂಟವನ್ನು ಕಟ್ಟಿಕೊಂಡು ಅದರ ಸದಸ್ಯರಾಗಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಎಸಗಿರುವುದಾಗಿ ಆರೋಪಿಸಲಾಗಿದೆ.

(2) ಅದೇ ದಿನ ಸ್ಥಳ ಮತ್ತು ಅದೇ ಸಮಯದಂದು ಆರೋಪಿಗಳು ಏಕೋದ್ದೇಶದಿಂದ ಚಾಸಾ–1 ಸಣ್ಣಮ್ಮ ರವರ ಜೊತೆಗೆ ಜಗಳ ತೆಗೆದು, ಗಲಾಟೆ ಮಾಡಿ, ವಿಧಿ ವಿರುದ್ಧ ಕೂಟದ ಸದಸ್ಯರಾಗಿ ದೊಂಬಿ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(3) ಅದೇ ದಿನ ಸ್ಥಳ ಮತ್ತು ಅದೇ ಆರೋಪಿಗಳು ಏಕೋದ್ದೇಶದಿಂದ ಚಾಸಾ-1 ಸಣ್ಣಮ್ಮ ರವರ ಜೊತೆ ಜಗಳ ತೆಗೆದು, ವಿಧಿ ವಿರುದ್ಧ ಕೂಟದ ಸದಸ್ಯರಾಗಿ ಮಾರಕ ಆಯುಧಗಳಾದ ದೊಣ್ಣೆ ಮತ್ತು ಕಲ್ಲನ್ನು ಕೈಯಲ್ಲಿ ಹಿಡಿದು ದೊಂಬಿ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(4) ಅದೇ ದಿನ ಸ್ಥಳ ಮತ್ತು ಅದೇ ಆರೋಪಿಗಳು ಏಕೋದ್ದೇಶದಿಂದ ಚಾಸಾ-ಸಣ್ಣಮ್ಮ ರವರ ಜೊತೆ ಜಗಳ ತೆಗೆದು, ಗಲಾಟೆ ಮಾಡಿ, ಚಾಸಾ-1 ಸಣ್ಣಮ್ಮ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದನೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(5) ಅದೇ ದಿನ ಸ್ಥಳ ಮತ್ತು ಅದೇ ಸಮಯದಂದು ಆರೋಪಿಗಳು ಏಕೋದ್ದೇಶದಿಂದ ಚಾಸಾ-1 ಸಣ್ಣಮ್ಮ ರವರ

ಜೊತೆ ಜಗಳ ತೆಗೆದು, 1 ರಿಂದ 3 ನೇ ಆರೋಪಿಗಳು ಚಪ್ಪಲಿಯಿಂದ ಚಾಸಾ-1 ಸಣ್ಣಮ್ಮ ರವರಿಗೆ ಹೊಡೆದು ಅವಮಾನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 355 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(6) ಅದೇ ದಿನ ಸ್ಥಳ ಮತ್ತು ಅದೇ ಸಮಯದಂದು ಆರೋಪಿಗಳು ಏಕೋದ್ದೇಶದಿಂದ ಚಾಸಾ-1 ಸಣ್ಣಮ್ಮ ರವರ ಜೊತೆ ಜಗಳ ತೆಗೆದು, ಜಗಳ ಬಿಡಿಸಲು ಬಂದ ಚಾಸಾ-2 ಮಹೇಶ ಮತ್ತು ಚಾಸಾ-3 ಮಹದೇವ ರವರಿಗೆ 1 ಮತ್ತು 4 ನೇ ಆರೋಪಿಗಳು ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(7) ಅದೇ ದಿನ ಸ್ಥಳ ಮತ್ತು ಅದೇ ಸಮಯದಂದು ಆರೋಪಿಗಳು ಏಕೋದ್ದೇಶದಿಂದ ಚಾಸಾ-1 ಸಣ್ಣಮ್ಮ ರವರ ಜೊತೆ ಜಗಳ ತೆಗೆದು, ಜಗಳ ಬಿಡಿಸಲು ಬಂದ ಚಾಸಾ-2

ಮಹೇಶ ಮತ್ತು ಚಾಸಾ-3 ಮಹದೇವ ರವರಿಗೆ 1 ಮತ್ತು 4 ನೇ ಆರೋಪಿಗಳು ಕಲ್ಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(8) ಅದೇ ದಿನ ಸ್ಥಳ ಮತ್ತು ಅದೇ ಸಮಯದಂದು ಆರೋಪಿಗಳು ಏಕೋದ್ದೇಶದಿಂದ ಚಾಸಾ-1 ಸಣ್ಣಮ್ಮ ರವರ ಜೊತೆ ಜಗಳ ತೆಗೆದು, 1, 4 ಮತ್ತು 5 ನೇ ಆರೋಪಿಗಳು ಚಾಸಾ-1 ಸಣ್ಣಮ್ಮ ರವರ ರವಿಕೆಯ ಒಳಗೆ ಕೈಹಾಕಿ, ರವಿಕೆಯನ್ನು ಹರಿದು ಹಾಕಿ, ಅವಮಾನ ಮಾಡುವ ಉದ್ದೇಶದಿಂದ ಸೀರೆಯನ್ನು ಹಿಡಿದು ಎಳೆದಾಡಿ, ಅಮಾನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 354(ಬಿ) ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(9) ಅದೇ ದಿನ ಸ್ಥಳ ಮತ್ತು ಅದೇ ಸಮಯದಂದು ಆರೋಪಿಗಳು ಏಕೋದ್ದೇಶದಿಂದ ಚಾಸಾ-1 ಸಣ್ಣಮ್ಮ ರವರ

ಜೊತೆ ಜಗಳ ತೆಗೆದು, 7 ರಿಂದ 15 ನೇ ಆರೋಪಿಗಳು ಇತರೆ ಆರೋಪಿಗಳಿಗೆ ಚಾಸಾ-1 ಸಣ್ಣಮ್ಮ ರವರನ್ನು ಬಿಡಬೇಡಿ, ಹೊಡೆದು ಹಾಕಿ ಎಂದು ಕುಮ್ಮಕ್ಕು ನೀಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 114 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(10) ಅದೇ ದಿನ ಸ್ಥಳ ಮತ್ತು ಅದೇ ಸಮಯದಂದು ಆರೋಪಿಗಗಳು ಏಕೋದ್ದೇಶದಿಂದ ಚಾಸಾ-1 ಸಣ್ಣಮ್ಮ ರವರ ಜೊತೆ ಜಗಳ ತೆಗೆದು, ಚಾಸಾ-1 ಸಣ್ಣಮ್ಮ, ಚಾಸಾ-2 ಮಹೇಶ ಮತ್ತು ಚಾಸಾ-3 ಮಹದೇವರವರಿಗೆ "ಈ ದಿನ ನಿಮ್ಮ ಟೈಂ ಚೆನ್ನಾಗಿದೆ, ನಿಮಗೊಂದು ಗತಿ ಕಾಣಿಸದೆ ಬಿಡುವುದಿಲ್ಲ " ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(11). ಯಾವ ಆದೇಶ?

9. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ ಸಂಖ್ಯೆ** : 1 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 2 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 3 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 4 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 5 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 6 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 7 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 8 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 9 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 10 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 11 : **ನಕಾರಾತ್ಮಕವಾಗಿ**

**ಅಂಶ ಸಂಖ್ಯೆ** : 12 : **ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,**

## ಕಾರಣಗಳು

10. **ಅಂಶ ಸಂಖ್ಯೆ:1 ರಿಂದ 11**: ಈ 11 ಅಂಶಗಳು ಒಂದಕ್ಕೊಂದು ಅಂತರ್ಗತ ಸಂಬಂಧವನ್ನು ಹೊಂದಿರುವುದರಿಂದ ಹಾಗು ವಸ್ತುಸ್ಥಿತಿಗಳು, ಸಂಗತಿಗಳು ಪುನರಾವರ್ತನೆಯಾಗುವುದನ್ನು ತಪ್ಪಿಸಲು ಸದರಿ ಈ 11 ಅಂಶಗಳನ್ನು ಏಕ ಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. 1 ರಿಂದ 15 ನೇ ಆರೋಪಿತರ ಮೇಲೆ ಮಾಡಿರುವ ಆರೋಪಗಳನ್ನು

ಸಾಬೀತು ಪಡಿಸಲು ಅಭಿಯೋಜನೆಯವರು ಚಾಸಾ-1 ರಿಂದ 3 ರವರನ್ನು ಪ್ರಾಸಾ-1 ರಿಂದ 3 ಎಂದು ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರವಾಗಿ ನಿಪಿ-1 ರಿಂದ 6 ನ್ನು ನಿಶಾನೆಗಳನ್ನಾಗಿ ಗುರ್ತಿಸಿಕೊಂಡಿರುತ್ತಾರೆ.

**11.** ಚಾಸಾ-1 ನೇಯವರಾದ ಸಣ್ಣಮ್ಮ ಇವರು ಈ ಪ್ರಕರಣದಲ್ಲಿ ದೂರುದಾರರು ಮತ್ತು ಗಾಯಾಳು ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆ ಪರವಾಗಿ ಪ್ರಾಸಾ-1 ಎಂದು ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ತನಗೆ ಏನೂ ಗೊತ್ತಿಲ್ಲ, ನಿಪಿ-1 ಮತ್ತು 2 ರ ದಾಖಲೆಯಲ್ಲಿ ಬರೆದ ವಿಚಾರಗಳು ತನಗೆ ಗೊತ್ತಿಲ್ಲ, ಆರೋಪಿತರು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹಲ್ಲೆ ಮಾಡಿಲ್ಲ, ಅವಮಾನ ಮಾಡಿಲ್ಲ ಎಂದು ಹೇಳುತ್ತಾರೆ. ನಂತರ ಪ್ರಾಸಾ-1 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ವಿವರವಾಗಿ ಪಾಟೀ ಸವಾಲು ಮಾಡಿದರೂ ಸಹಿತ ಅಭಿಯೋಜನೆಗೆ ಪೂರಕ ಸಾಕ್ಷ್ಯವನ್ನು ಪಡೆಯಲು ವಿಫಲವಾಗಿರುತ್ತಾರೆ.

**12.** ಚಾಸಾ-2 ನೇಯವರಾದ ಮಹೇಶ ಇವರು ಈ ಪ್ರಕರಣದಲ್ಲಿ ಪ್ರತ್ಯಕ್ಷ ಮತ್ತು ಗಾಯಾಳು ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆ ಪರವಾಗಿ ಪ್ರಾಸಾ-2 ಎಂದು ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ತನಗೆ ಏನೂ

ಗೊತ್ತಿಲ್ಲ, ಆರೋಪಿತರು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹಲ್ಲೆ ಮಾಡಿಲ್ಲ, ಫ್ರಾಸಾ-1 ರವರಿಗೆ ಅವಮಾನ ಮಾಡಿಲ್ಲ, ಅವರು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಹೇಳುತ್ತಾರೆ. ನಂತರ ಫ್ರಾಸಾ-2 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ವಿವರವಾಗಿ ಪಾಟೀ ಸವಾಲು ಮಾಡಿದರೂ ಸಹಿತ ಅಭಿಯೋಜನೆಗೆ ಪೂರಕ ಸಾಕ್ಷ್ಯವನ್ನು ಪಡೆಯಲು ವಿಫಲವಾಗಿರುತ್ತಾರೆ.

**13.** ಚಾಸಾ-3 ನೇಯವರಾದ ಮಹದೇವಸ್ವಾಮಿ ಇವರು ಈ ಪ್ರಕರಣದಲ್ಲಿ ಪ್ರತ್ಯಕ್ಷ ಮತ್ತು ಗಾಯಾಳು ಸಾಕ್ಷಿದಾರರಾಗಿದ್ದು, ಇವರು ಅಭಿಯೋಜನೆ ಪರವಾಗಿ ಫ್ರಾಸಾ-3 ಎಂದು ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ತನಗೆ ಏನೂ ಗೊತ್ತಿಲ್ಲ, ಆರೋಪಿತರು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹಲ್ಲೆ ಮಾಡಿಲ್ಲ, ಫ್ರಾಸಾ-1 ರವರಿಗೆ ಅವಮಾನ ಮಾಡಿಲ್ಲ, ಅವರು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಹೇಳುತ್ತಾರೆ. ನಂತರ ಫ್ರಾಸಾ-3 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಭಾಗಶಃ ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ವಿವರವಾಗಿ ಪಾಟೀ ಸವಾಲು ಮಾಡಿದರೂ ಸಹಿತ ಅಭಿಯೋಜನೆಗೆ ಪೂರಕ ಸಾಕ್ಷ್ಯವನ್ನು ಪಡೆಯಲು ವಿಫಲವಾಗಿರುತ್ತಾರೆ.

**14.** ನಂತರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಇತರೆ ಸಾಕ್ಷಿದಾರರುಗಳಿಗೆ ಸಮನ್ಸ್ ನೀಡಬೇಕೆಂದು ಕೋರಿರುತ್ತಾರೆ. ಫಿರ್ಯಾದಿ ಹಾಗು ಗಾಯಾಳು

ಸಾಕ್ಷಿದಾರರಾದ ಪ್ರಾಸಾ–1 ರವರು ಹಾಗು ಗಾಯಾಳು ಮತ್ತು ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ–2 ಮತ್ತು 3 ರವರುಗಳು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯದೆ ಪ್ರತಿಕೂಲ ಸಾಕ್ಷಿದಾರಾಗಿ ಪರಿಗಣಿಸಿ, ಆರೋಪಿತರ ಜೊತೆಗೆ ರಾಜಿ ಮಾಡಿಕೊಂಡಿರುವುದಾಗಿ ಸಾಕ್ಷಿ ನುಡಿದಿರುವ ಕಾರಣ ಹಾಗು ನ್ಯಾಯಾಲಯದ ಅಮೂಲ್ಯ ಸಮಯವನ್ನು ಉಳಿಸುವ ಸಲುವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮನವಿಯನ್ನು ತಿರಸ್ಕರಿಸಲಾಯಿತು.

**15.** ಪ್ರಾಸಾ–1 ರಿಂದ 3 ರವರು ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿಯದೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ–1 ರಿಂದ 3 ರವರು ತಾವು ಗುರುತಿಸಿರುವ ನಿಪಿ–1 ರಿಂದ 6 ರ ನಿಶಾನೆಗೆ ಅನುಗುಣವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗು ತನಿಖಾಧಿಕಾರಿಗಳ ಮುಂದೆ ನೀಡಿದ ಹೇಳಿಕೆಯನ್ನು ನ್ಯಾಯಾಲಯದಲ್ಲಿ ಪುನರಾವರ್ತಿಸಲು ಸಾಧ್ಯವಾಗಿರುವುದಿಲ್ಲ. ಇವರು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದು, ಪ್ರತಿಕೂಲ ಸಾಕ್ಷಿದಾರರಾಗಿ ಪರಿಗಣಿಸಿರುತ್ತಾರೆ. ಆದ್ದರಿಂದ ಅಭಿಯೋಜನೆಯವರು ಪ್ರಕರಣವನ್ನು ನ್ಯಾಯಾಲಯದಲ್ಲಿ ಸಾಬೀತು ಪಡಿಸಲು ಸಂಪೂರ್ಣವಾಗಿ ವಿಫಲರಾಗಿದ್ದು, ಆರೋಪಿತರು ತಪ್ಪಿತಸ್ಥರೆಂದು ನಿರ್ಧರಿಸಲು ನ್ಯಾಯಾಲಯದ ಮುಂದೆ ಸಾಕ್ಷ್ಯದಾರಗಳು ಕಂಡು ಬರುವುದಿಲ್ಲವಾದ್ದರಿಂದ, ಸಂಶಯದ ಲಾಭವನ್ನು ಆರೋಪಿತರಿಗೆ ನೀಡಲಾಯಿತು. ಹೀಗಾಗಿ ಅಭಿಯೋಜನೆಯವರು ಆರೋಪಿತರ ಮೇಲೆ ಹೊರಿಸಲಾಗಿರುವ ಆಪಾದನೆಗಳನ್ನು ಸಂಶಯಾತೀತವಾಗಿ ಸಾಬೀತು

ಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ತೀರ್ಮಾನಿಸಿ ಮೇಲ್ಕಂಡ **ಅಂಶ ಸಂಖ್ಯೆ 1 ರಿಂದ** 11 ನ್ನು **ನಕಾರಾತ್ಮಕವಾಗಿ** ಉತ್ತರಿಸಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

16. **ಅಂಶ ಸಂಖ್ಯೆ 12** : ಈ ಮೇಲ್ಕಂಡ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಗಾಗಿ ಈ ಅಂತಿಮ ಆದೇಶ ಈ ಕೆಳಕಂಡಂತೆಃ–

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಅಧಿಕಾರಯುಕ್ತಳಾಗಿ 1 ರಿಂದ 7, 9 ರಿಂದ 15 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 143, 147, 148, 504, 355, 323, 324, 354(ಬಿ), 114, 506 ಸಹವಾಚಕ ಕಲಂ 149 ರ ಅಡಿಯಲ್ಲಿ ಹೊರಿಸಲಾದಂತಹ ಆಪಾದನೆಗಳಿಂದ 1 ರಿಂದ 7, 9 ರಿಂದ 15 ನೇ ಆರೋಪಿತರನ್ನು ದೋಷಮುಕ್ತಗೊಳಿಸಿ, ಬಿಡುಗಡೆ ಮಾಡಲಾಗಿದೆ.

ಆರೋಪಿತರು ಹಾಗೂ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

ಈ ಪ್ರಕರಣದ ಮಾಲು ಪಟ್ಟಿ ಸಂಖ್ಯೆ ***90*/2022** (ಪಿ.ಆರ್.ನಂ.**56/2023**)ರ ಕಾಲಂ ನಂ.***4*** ರಲ್ಲಿ ನಮೂದಿಸಿರುವ ಒಂದು ಮರದ ಪಟ್ಟಿ, ಒಂದು ಕೈಹಿಡಿ ಗಾತ್ರದ ಕಲ್ಲು, ಒಂದು ಚಪ್ಪಲಿ, ಒಂದು ಸೀರೆ, ಒಂದು ರವಿಕೆ ಬೆಲೆ ಬಾಳದ

ವಸ್ತುಗಳಾದ ಕಾರಣ ಮೇಲ್ಮನವಿ ಅವಧಿ ಮುಗಿದ ನಾಶಪಡಿಸಲು ಆದೇಶಿಸಿದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖದ ಮೂಲಕ ಹೇಳಿ, ಲಿಪ್ಯಂತರ ಮಾಡಿಸಿ, ನನ್ನಿಂದ ಸೂಕ್ತವಾಗಿ ತಿದ್ದುಪಡಿಯಾದ ನಂತರ ದಿನಾಂಕ 28 ನೇ ನವೆಂಬರ್ 2024 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಎ.ಎನ್.ಕಾಂತಮ್ಮ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಗುಂಡ್ಲುಪೇಟೆ.**

## * ಅನುಬಂಧ *

**I.ಅಭಿಯೋಜನೆ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

ಪ್ರಾಸಾ : 1 : ಸಣ್ಣಮ್ಮ
ಪ್ರಾಸಾ : 2 : ಮಹೇಶ ಎಂ
ಪ್ರಾಸಾ : 3 : ಮಹದೇವಸ್ವಾಮಿ

**II.ಅಭಿಯೋಜನೆ ಪರ ಗುರ್ತಿಸಲ್ಪಟ್ಟ ದಾಖಲೆಗಳ ಪಟ್ಟಿ:**

ನಿಪಿ : 1 : ದೂರು
ನಿಪಿ : 2 : ಮಹಜರ್
ನಿಪಿ : 3 : ಕಲಂ 164 ಸಿ ಆರ್ ಪಿ ಸಿ ಅಡಿಯಲ್ಲಿನ ಹೇಳಿಕೆ
ನಿಪಿ : 4 : ಛಾಯಾಚಿತ್ರ
ನಿಪಿ : 5 : ಪ್ರಾಸಾ–2 ರವರ ಹೇಳಿಕೆ
ನಿಪಿ : 6 : ಪ್ರಾಸಾ–3 ರವರ ಹೇಳಿಕೆ

**III.ಅಭಿಯೋಜನೆ ಪರ ಗುರ್ತಿಸಲ್ಪಟ್ಟ ಮುದ್ದೆಮಾಲು ಪಟ್ಟಿ: ಇಲ್ಲ**

**IV.ಆರೋಪಿ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ: ಇಲ್ಲ**

**V.ಆರೋಪಿ ಪರ ಗುರ್ತಿಸಲ್ಪಟ್ಟ ದಾಖಲೆಗಳ ಪಟ್ಟಿ: ಇಲ್ಲ**

**(ಎ. ಎನ್. ಕಾಂತಮ್ಮ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಗುಂಡ್ಲುಪೇಟೆ.**

Visit **ecourts.gov.in** for updates or download mobile app "**eCourts Services**" from Android or iOS

*SK*